2) ಮಾರಾಟ ತೆರಿಗೆ ವಿನಾಯಿತಿ

3) ಕೆ.ಇ.ಬಿ.ಯಿಂದ ವಿದ್ಯುತ್ ರಿಯಾಯಿತಿಗಳು.

4) ಕೆಐಎಡಿಬಿ: ಕೆಎಸ್ಎಸ್ಐಡಿಸಿ, ಕಿಯೋನಿಕ್ಸ್ ಸಂಸ್ಥೆಗಳಿಗೆ ನೀಡಬೇಕಾಗಿರುವ ಸುಸ್ತಿ ಬಾಕಿ ಮರು ಹೊಂದಾಣಿಕೆ.

5) ಅಭಿವೃದ್ಧಿ ಸಾಲದ ಮರು ಹೊಂದಾಣಿಕೆ.

6) ರೋಗಗ್ರಸ್ಥ ಘಟಕಗಳಿಗೆ ಕಾರ್ಮಿಕ ವಿವಾದಗಳನ್ನು ಬಗೆಹರಿಸಲು ಕಾರ್ಮಿಕ ಇಲಾಖೆಯ ಮೂಲಕ ನೆರವು.

ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆ

108 (191)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳನ್ನು ಸ್ಥಾಪಿಸುವ ಉದ್ದೇಶ ಸರ್ಕಾರದವರಿಗಿದೆಯೇ?

ಆ) ರೈತರು ಬೆಳೆದ ಕಚ್ಚಾ ವಸ್ತುಗಳನ್ನು ಕನಿಷ್ಟ ಸಿದ್ಧವಸ್ತುಗಳನ್ನಾಗಿ ತಯಾರಿಸಲು ಕೈಗಾರಿಕೆಯನ್ನು ಸ್ಥಾಪಿಸುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೇ?

ಶ್ರೀ ಬಿ.ಎ.ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು):

ಅ) ಸರ್ಕಾರವು ಸಣ್ಣ ಕೈಗಾರಕೆಗಳನ್ನು ಸ್ಥಾಪಿಸುವುದಿಲ್ಲ. ಉದ್ಯಮಿಗಳು ಮುಂದೆ ಬಂದು ಸ್ಥಾಪಿಸಿದ್ದೇ ಆದಲ್ಲಿ ಕೈಗಾರಿಕೆ ನೀತಿ ಅನ್ವಯ ಅನೇಕ ಉತ್ತೇಜನ ಹಾಗೂ ರಿಯಾಯಿತಿಗಳನ್ನು ನೀಡುತ್ತದೆ.

ಆ) ಉದ್ಭವಿಸುವುದಿಲ್ಲ

ಎ.ಡಿ.ಬಿ. ನಿಧಿಯಿಂದ ರಾಜ್ಯದಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ.

109 (193)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ಎ.ಡಿ.ಬಿ. ನಿಧಿಯಿಂದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಪಡೆದ ಸಾಲದ ಮೊತ್ತವೆಷ್ಟು?

ಆ) ಸದರಿ ಹಣದಲ್ಲಿ ರಾಜ್ಯದ ಯಾವ ಯಾವ ನಗರಗಳಿಗೆ ಎಷ್ಟು ಹಣ ನಿಗದಿಪಡಿಸಲಾಗಿದೆ?

ಇ) ಸದರಿ ಹಣದಿಂದ ಯಾವ ಯಾವ ಮೂಲ ಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.

ಈ) ಈಗಾಗಲೇ ಕೈಗೆತ್ತಿಕೊಂಡಿರುವ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾರ್ಯಗಳಾವುವು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):

ಅ) ರೂ. 266.90 ಕೋಟಿಗಳು.

ಆ)

ನಗರ	ರೂ. ಕೋಟಿಗಳಲ್ಲಿ
ಮೈಸೂರು	120.98
ತುಮಕೂರು	55.99
ರಾಮನಗರ	21.04
ಚನ್ನಪಟ್ಟಣ	31.24

ಇ ಮತ್ತು ಈ) ವಿವರಗಳನ್ನು ತಃಖ್ತೆಯಲ್ಲಿ ಒದಗಿಸಿದೆ.

ಕರ್ನಾಟಕ ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಯ ವಿವರಗಳು.

ಮೈಸೂರು ಕಾಮಗಾರಿಗಳು:

ಕ್ರ.ಸಂ.	ಕಾಮಗಾರಿಗಳ ವಿವರ		ಯೋಜನಾ ಪ್ರಗತಿಯ ಸ್ಥಿತಿ
1)	ನೀರು ಸರಬರಾಜು-ಇನ್‌ಟೇಕ್ ವರ್ಕ್ಸ್	-	ಗುತ್ತಿಗೆದಾರನಿಗೆ ಕೆಲಸದ ಆದೇಶ ನೀಡಲಾಗಿದೆ.
2)	ನೀರು ಸರಬರಾಜು-ನೀರು ಶುದ್ಧೀಕರಣ ಯಂತ್ರ	-	ಟೆಂಡರುಗಳನ್ನು 21-01-98ರಂದು ತೆಗೆಯಲಾಗಿದೆ. ತಾಂತ್ರಿಕ ಮೌಲ್ಯ ಮಾಪನ ನಡೆದಿದೆ.
3)	ನೀರು ಸರಬರಾಜು-ರಾ ವಾಟರ್ ಮೇನ್ಸ್	-	ಗುತ್ತಿಗೆದಾರನಿಗೆ ಕೆಲಸದ ಆದೇಶ ನೀಡಲಾಗಿದೆ.
4)	ನೀರು ಸರಬರಾಜು-ವಾಟರ್ ಮೇನ್ ಗ್ರೌಂಡ್ ವಾಟರ್ ರಿಸರ್‌ವಾಯರ್	-	ಟೆಂಡರುಗಳನ್ನು 19-2-98ರಂದು ತೆರೆಯಲಾಗಿದೆ. ಮೌಲ್ಯ ಮಾಪನ ನಡೆದಿದೆ.
5)	ನೀರು ಸರಬರಾಜು-ಸಿಬ್ಬಂದಿ ಗೃಹಗಳು	-	ವಿನ್ಯಾಸ ಮತ್ತು ಅಂದಾಜು ವೆಚ್ಚಗಳನ್ನು ತಯಾರಿಸಲಾಗುತ್ತಿದೆ.
6)	ಸಿವರೇಜ್-ಶುದ್ಧೀಕರಣ ಯಂತ್ರ ''ಎ'' ಮತ್ತು ''ಡಿ'' ಡಿಸ್ಟ್ರಿಕ್ಟ್	-	ವಿನ್ಯಾಸ ಮತ್ತು ಅಂದಾಜು ವೆಚ್ಚಗಳನ್ನು ತಯಾರಿಸಲಾಗುತ್ತಿದೆ-ಭೂ ಸ್ವಾಧೀನ ಕಾರ್ಯ ಪ್ರಗತಿಯಲ್ಲಿದೆ.
7)	ಸಿವರೇಜ್-ಶುದ್ಧೀಕರಣ ಯಂತ್ರ ''ಬಿ'' ಡಿಸ್ಟ್ರಿಕ್ಟ್	-	ಟೆಂಡರು ಸಲ್ಲಿಕೆಗೆ ಕೊನೆಯ ದಿನಾಂಕ 16-3-98.
8)	ಸಿವರೇಜ್-ಶುದ್ಧೀಕರಣ ಯಂತ್ರ ''ಸಿ'' ಡಿಸ್ಟ್ರಿಕ್ಟ್	-	ಭೂ ಸ್ವಾಧೀನ ಕಾರ್ಯ ಪ್ರಗತಿಯಲ್ಲಿದೆ.

9)	ಸಿವರೇಜ್-ಶುದ್ಧೀಕರಣ ಯಂತ್ರ ''ಎ'' ಮತ್ತು ''ಎ'' ಡಿಸ್ಟ್ರಿಕ್ಟ.	-	ವಿನ್ಯಾಸ ಮತ್ತು ಅಂದಾಜು ವೆಚ್ಚಗಳನ್ನು ತಯಾರಿಸಲಾಗುತ್ತಿದೆ. ಭೂ ಸ್ವಾಧೀನ ಕಾರ್ಯ ಪ್ರಗತಿಯಲ್ಲಿದೆ.
10)	ಸಿವರೇಜ್-ಟ್ರಂಕ್ ಸಿಎರ್ಸ್ ''ಬಿ'' ಡಿಸ್ಟ್ರಿಕ್ಟ್	-	ಗುತ್ತಿಗೆದಾರನಿಗೆ ಕೆಲಸದ ಆದೇಶ ನೀಡಲಾಗಿದೆ.
11)	ಸಿವರೇಜ್-ಶುದ್ಧೀಕರಣ ಯಂತ್ರ ''ಸಿ'' ಡಿಸ್ಟ್ರಿಕ್ಟ್	-	ಭೂ ಸ್ವಾಧೀನ ಕಾರ್ಯ ಪ್ರಗತಿಯಲ್ಲಿದೆ.
12)	ಹೊರ ವರ್ತುಲ ರಸ್ತೆ -		ಟೆಂಡರುಗಳನ್ನು ತಯಾರಿಸಲಾಗಿದೆ. ಭೂ ಸ್ವಾಧೀನದ ನಂತರ ಕರೆಯಲಾಗುವುದು.
13)	ಮಧ್ಯಮ ವರ್ತುಲ ರಸ್ತೆ	-	ಟೆಂಡರುಗಳ ಮೌಲ್ಯ ಮಾಪನವು ಪೂರ್ಣಗೊಂಡಿದ್ದು, ಎಡಿಬಿಗೆ ಅನುಮೋದನೆಗಾಗಿ ಕಳುಹಿಸಲಾಗುತ್ತಿದೆ.
14)	ನಗರ ರಸ್ತೆಗಳು (49 ರಸ್ತೆಗಳು)	-	ಟೆಂಡರುಗಳ ಮೌಲ್ಯಮಾಪನ ಪ್ರಗತಿಯಲ್ಲಿದೆ.
15)	ಟ್ರಕ್ ಟರ್ಮಿನಲ್	-	ಪರಿಷ್ಕೃತ ಫೀಸಿಬಿಲಿಟಿ ರಿಪೋರ್ಟ್‌ನ್ನು ತಯಾರಿಸಲಾಗುತ್ತಿದೆ.
16)	ಟ್ರಾಫಿಕ್ ಮ್ಯಾನೇಜ್‌ಮೆಂಟ್	-	ಕರಡು ಯೋಜನೆ ತಯಾರಿಸಲಾಗಿದೆ.
17)	ವಸತಿ ನಿವೇಶನ ಮತ್ತು ಸೌಲಭ್ಯಗಳು	-	ಕಾನ್‌ಸೆಪ್ಟ್ ಪ್ಲಾನ್ ತಯಾರಿಸಲಾಗುತ್ತಿದೆ.
18)	ಚರಂಡಿಗಳು	-	ಟೆಂಡರುಗಳನ್ನು ಕರೆಯಲಾಗಿದೆ.
19)	ಕಡಿಮೆ ವೆಚ್ಚದ ಶೌಚಾಲಯ	-	ಪೈಲೆಟ್ ಯೋಜನೆ ಮುಕ್ತಾಯಗೊಂಡಿದೆ.
20)	ಕಸ ಕಡ್ಡಿ ವಿಲೇವಾರಿ (ಯಂತ್ರಗಳು)	-	ಟೆಂಡರುಗಳನ್ನು ಕರೆಯಲಾಗಿದೆ.

(ಸಿವಿಲ್ ಕಾಮಗಾರಿಗಳು)	-	ಟೆಂಡರುಗಳನ್ನು ಕರೆಯಲಾಗಿದೆ.
21) ಲೀಕ್ ಡಿಟೆಕ್ಷನ್ ಯಂತ್ರಗಳು	-	ಯಂತ್ರಗಳ ಕೊಳ್ಳುವಿಕೆಯನ್ನು ನಿರ್ಧರಿಸಲಾಗುತ್ತಿದೆ.
22) ಕೊಳಚೆ ಪ್ರದೇಶಾಭಿವೃದ್ಧಿ	-	ಟೆಂಡರುಗಳ ಮೌಲ್ಯಮಾಪನ ಎಡಿಬಿಗೆ ಅನುಮೋದನೆಗಾಗಿ ಕಳುಹಿಸಲಾಗುತ್ತಿದೆ.

ತುಮಕೂರು ಕಾಮಗಾರಿಗಳು:

1) ನೀರು ಸರಬರಾಜು ಮತ್ತು ಒಳಚರಂಡಿ ನೆಟ್‌ವರ್ಕ್	-	ಟೆಂಡರನ್ನು ತಯಾರಿಸಲಾಗುತ್ತಿದೆ.
2) ಸಿವೇಜ್ ಟ್ರೀಟ್‌ಮೆಂಟ್ ಪ್ಲಾಂಟ್	-	ಪೊಲ್ಯೂಷನ್ ಕಂಟ್ರೋಲ್ ಬೋರ್ಡ್‌ನ ಪರವಾನಿಗೆಗಾಗಿ ಕಾಯಲಾಗುತ್ತಿದೆ.
3) ಕಸ ಕಡ್ಡಿ ವಿಲೇವಾರಿ ನಿರ್ವಹಣೆ	-	ಯಂತ್ರಗಳನ್ನು :ವಾಹನಗಳ ಖರೀದಿಗಾಗಿ ಟೆಂಡರುಗಳನ್ನು ಆಹ್ವಾನಿಸಲಾಗಿದೆ.
4) ನಗರ ರಸ್ತೆಗಳ ಸುಧಾರಣೆ	-	ನೀರಿನ ಕೊಳವೆಗಳ ಹಾಗೂ ಯು.ಜಿ.ಡಿ. ಕೊಳವೆಗಳ ಕೆಲಸವಾದ ಮೇಲೆ ಕೈಗೆತ್ತಿಕೊಳ್ಳಲಾಗುವುದು.
5) ಸದರನ್ ಬೈಪಾಸ್ ರೋಡ್:ರಿಂಗ್ ರೋಡ್	-	ವಿನ್ಯಾಸ ಹಾಗೂ ಟೆಂಡರುಗಳನ್ನು ತಯಾರಿಸಲಾಗುತ್ತಿದೆ. ಭೂ ಸ್ವಾಧೀನ ಕಾರ್ಯ ಪ್ರಗತಿಯಲ್ಲಿದೆ.
6) ಕೊಳಚೆ ಅಭಿವೃದ್ಧಿ -		ಟೆಂಡರುಗಳ ಮೌಲ್ಯಮಾಪನ ಮುಗಿದಿದೆ. ಎಡಿಬಿ ಅನುಮೋದನೆಗಾಗಿ ಕಳುಹಿಸಲಾಗುತ್ತಿದೆ.

7)	ಕಡಿಮೆ ವೆಚ್ಚದ ಶೌಚಾಲಯ -		ಪೈಲಟ್ ಪ್ರಾಜೆಕ್ಟ್ ಮುಕ್ತಾಯಗೊಂಡಿದೆ.
8)	ವಸತಿ-ನಿವೇಶನ ಮತ್ತು ಸೌಲಭ್ಯಗಳು -		ವಿನ್ಯಾಸ ಮತ್ತು ಅಂದಾಜುಗಳನ್ನು ತಯಾರಿಸಲಾಗುತ್ತಿದೆ.
9)	ಕೈಗಾರಿಕಾ-ನಿವೇಶನ ಮತ್ತು ಸೌಲಭ್ಯಗಳು.	-	ವಿನ್ಯಾಸ ಮತ್ತು ಅಂದಾಜು ವೆಚ್ಚಗಳನ್ನು ತಯಾರಿಸಲಾಗುತ್ತಿದೆ.
10)	ಮಹಿಳಾ ತರಬೇತಿ ಕೇಂದ್ರ	-	ಯೋಜನೆಯನ್ನು ತಯಾರಿಸಲಾಗುತ್ತಿದೆ.
11)	ಟ್ರಕ್ ಟರ್ಮಿನಲ್	-	ವಿನ್ಯಾಸಗಳನ್ನು ತಯಾರಿಸಲಾಗುತ್ತಿದೆ ಭೂ ಸ್ವಾಧೀನ ಕಾರ್ಯ ಪ್ರಗತಿಯಲ್ಲಿದೆ.

ರಾಮನಗರಂ ಕಾಮಗಾರಿಗಳು:

1)	ನೀರುಸರಬರಾಜು ಮತ್ತು ಒಳಚರಂಡಿ ನೆಟವರ್ಕ್	-	ಟೆಂಡರುಗಳನ್ನು ಮೌಲ್ಯ ಮಾಪನ ನಡೆಯುತ್ತಿದೆ.
2)	ಸಿವೇಜ್ ಟ್ರೀಟ್‌ಮೆಂಟ್ ಪ್ಲಾಂಟ್	-	ಪೊಲ್ಯೂಷನ್ ಕಂಟ್ರೋಲ್ ಬೋರ್ಡ್ ಪರವಾನಿಗೆಗಾಗಿ ಕಾಯಲಾಗುತ್ತಿದೆ.
3)	ಕಸ ಕಡ್ಡಿ ವಿಲೇವಾರಿ ನಿರ್ವಹಣೆ	-	ಯಂತ್ರಗಳ :. ವಾಹನಗಳ ಖರೀದಿಗಾಗಿ ಟೆಂಡರುಗಳನ್ನು ಕರೆಯಲಾಗಿದೆ. ಸ್ಥಳಗಳಿಗೆ ಭೂ ಸ್ವಾಧೀನ ಕಾರ್ಯ ಪ್ರಗತಿಯಲ್ಲಿದೆ.
4)	ನಗರ ರಸ್ತೆಗಳ ಸುಧಾರಣೆ	-	ವಿನ್ಯಾಸ ಮತ್ತು ಅಂದಾಜು ವೆಚ್ಚಗಳನ್ನು ತಯಾರಿಸಲಾಗುತ್ತಿದೆ. ನೀರು ಸರಬರಾಜು ಹಾಗೂ ಒಳ ಚರಂಡಿ ಕೊಳವೆಗಳನ್ನು ಹಾಕಿದಮೇಲೆ ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

5)	ರಾಮನಗರಂ-ಚನ್ನಪಟ್ಟಣ ನಗರಗಳಲ್ಲಿ ಬೆಂಗಳೂರು-ಮೈಸೂರು ರಸ್ತೆ ಅಗಲಿಸುವಿಕೆ	-	ಕಾಂಟ್ರಕ್ಟ್ ನೀಡಲಾಗಿದೆ. ಕೆಲಸವು ಸಧ್ಯದಲ್ಲಿಯೇ ಪ್ರಾರಂಭಗೊಳ್ಳಲಿದೆ.
6)	ರಾಮನಗರಂ-ಚನ್ನಪಟ್ಟಣ ನಗರಗಳಲ್ಲಿ ಕೊಳವೆ ಪ್ರಾದೇಶಾಭಿವೃದ್ಧಿ	-	ಟೆಂಡರುಗಳ ಮೌಲ್ಯಮಾಪನ ಮುಗಿದಿದೆ. ಎಡಿಬಿಗೆ ಅನುಮೋದನೆಗಾಗಿ ಕಳುಹಿಸಲಾಗುತ್ತಿದೆ.
7)	ಕಡಿಮೆ ವೆಚ್ಚದ ಶೌಚಾಲಯ	-	ಪೈಲಟ್ ಪ್ರಾಜೆಕ್ಟ್ಸ ಮುಗಿದಿದೆ.
8)	ವಸತಿ-ನಿವೇಶನ ಮತ್ತು ಸೌಲಭ್ಯಗಳು	-	ಲೇಔಟ್ ಪ್ಲಾನ್ ತಯಾರಿಕೆಯಲ್ಲಿದೆ. ಭೂ ಸ್ವಾಧೀನ ಪ್ರಗತಿಯಲ್ಲಿದೆ.
9)	ಕೈಗಾರಿಕೆ-ನಿವೇಶನ ಮತ್ತು ಸೌಲಭ್ಯಗಳು	-	ಭೂಮಿಯನ್ನು ಗುರುತಿಸುವ ಕಾರ್ಯ ನಡೆಯುತ್ತಿದೆ.
10)	ಕಲ್ಚರಲ್ ಮತ್ತು ಕಮರ್ಷಿಯಲ್ ಸೆಂಟರ್	-	ವಿನ್ಯಾಸ ಮತ್ತು ಅಂದಾಜು ವೆಚ್ಚಗಳನ್ನು ತಯಾರಿಸಲಾಗುತ್ತಿದೆ.
11)	ಬಸ್ ಪಾರ್ಕ್: ನಿರ್ಮಾಣ	-	ವಿನ್ಯಾಸ ಮತ್ತು ಅಂದಾಜು ವೆಚ್ಚಗಳನ್ನು ತಯಾರಿಸಲಾಗುತ್ತಿದೆ.
12)	ಅರ್ಕಾವತಿ ನದಿಯ ನಡುವೆ ಸೇತುವೆ ನಿರ್ಮಾಣ	-	ವಿನ್ಯಾಸ ಮತ್ತು ಅಂದಾಜು ವೆಚ್ಚಗಳನ್ನು ತಯಾರಿಸಲಾಗುತ್ತಿದೆ.

ಚನ್ನಪಟ್ಟಣ ಕಾಮಗಾರಿಗಳು:

1)	ವಾಟರ್ ಲೈನಿಂಗ್ ಮೇನ್ (ಟಿ.ಕೆ.ಹಳ್ಳಿ)	-	ಕಾಂಟ್ರಾಕ್ಟ್ ನೀಡಲಾಗಿದೆ. ಕೆಲಸ ಪ್ರಾರಂಭ ಗೊಳ್ಳಲಿದೆ.
2)	ನೀರು ಶುದ್ಧೀಕರಣ ಯಂತ್ರ (ಟಿ.ಕೆ.ಹಳ್ಳಿ)	-	ಟೆಂಡರುಗಳ ಮೌಲ್ಯಮಾಪನ ಪ್ರಗತಿಯಲ್ಲಿದೆ.

3)	ಇಂಟರ್ ಮೀಡಿಯೆಟ್ ಪಂಪಿಂಗ್ ಸ್ಟೇಷನ್ ಮತ್ತು ಗ್ರೌಂಡ್ ಲೆವೆಲ್ ರಿಸರ್ವಾಯರ್	-	ಟೆಂಡರುಗಳ ಮೌಲ್ಯಮಾಪನ ಪ್ರಗತಿಯಲ್ಲಿದೆ.
4)	ನೀರು ಸರಬರಾಜು-ಡಿಸ್ಟ್ರಿಬ್ಯೂಷನ್ ಸಿಸ್ಟಂ	-	ಟೆಂಡರುಗಳ ಮೌಲ್ಯಮಾಪನ ಪ್ರಗತಿಯಲ್ಲಿದೆ.
5)	ಸಿಬ್ಬಂದಿ ಗೃಹಗಳು	-	ವಿನ್ಯಾಸಗಳು ತಯಾರಿಕೆಯಲ್ಲಿವೆ.
6)	ಕಸ ಕಡ್ಡಿ ವಿಲೇವಾರಿ ನಿರ್ವಹಣೆ	-	ಯಂತ್ರಗಳ:ವಾಹನಗಳ ಖರೀದಿಗೆ ಟೆಂಡರುಗಳನ್ನು ಕರೆಯಲಾಗಿದೆ. ಉಳಿದ ಕಾಮಗಾರಿಗಳಿಗೆ ವಿನ್ಯಾಸಗಳನ್ನು ತಯಾರಿಸಲಾಗುತ್ತಿದೆ.
7)	ನಗರ ರಸ್ತೆಗಳ ಸುಧಾರಣೆ	-	ಟೆಂಡರುಗಳನ್ನು ಕರೆಯಲಾಗುತ್ತಿದೆ.
8)	ಕಡಿಮೆ ವೆಚ್ಚದ ಶೌಚಾಲಯ	-	ಪೈಲಟ್ ಪ್ರಾಜೆಕ್ಟ್ ಮುಗಿದಿದೆ.
9)	ವಸತಿ-ನಿವೇತನ ಮತ್ತು ಸೌಲಭ್ಯಗಳು	-	ವಿನ್ಯಾಸ ಮತ್ತು ಅಂದಾಜು ವೆಚ್ಚಗಳನ್ನು ತಯಾರಿಸಲಾಗುತ್ತಿದೆ.